(೪) ಬಾದಾಮಿತಾಲ್ಲೂಕಿನ ಐಹೊಳೆ ಸಿದ್ದನಕೊಳ ಚಿಮ್ಮಲಗಿರಸ್ತೆ ನಿರ್ಮಾಣ

ಶ್ರೀ ಎಂ.ಎಲ್.ಉಸ್ತಾದ್.—ಮಾನ್ಯ ಅಧ್ಯಕ್ಷರೆ,ಬಿಜಾಪುರ ಜಿಲ್ಲೆಯಬಾದಾಮಿ ತಾಲ್ಲೂಕಿನಲ್ಲಿ ಐಹೊಳೆ ಸಿದ್ದನಕೊಳ ಚಿಮ್ಮಲಗಿ ರಸ್ತೆ ನಿರ್ಮಾಣವು ಆರಂಭವಾಗಿ ಸುಮಾರು ಐದು ವರ್ಷಗಳಾಗಿದ್ದರೂ ಆದು ಇನ್ನೂಪೂರ್ತಿಗೊಂಡಿಲ್ಲ. ಸಿದ್ದನಕೊಳ ಮತ್ತು ಚಿಮ್ಮಲಗಿ ಮಧ್ಯ ಒಂದು ಸೇತುವೆಯನ್ನು ಈಗಾಗಲೇ ನಿರ್ಮಿಸಲಾಗಿರುವುದಾದರೂ ರಸ್ತೆ ನಿರ್ಮಾಣ ಕಾರ್ಯವು ಭೂಮಾಲೀಕರ ಆಕ್ಷೇಪಣೆಯಿಂದಾಗಿ ಸ್ಥಗಿತ ಗೊಂಡಿರುತ್ತದೆ. ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನ ಕಾಯಿದೆ ಪ್ರಕಾರ ಸ್ವಾಧೀನ ಪಡಿಸಬೇಕೆಂಬ ಆದೇಶವಿರುವುದಾದರೂ ಈ ಬಗ್ಗೆ ವಿಳಂಬವಾಗಿರುವುದನ್ನು ಪರಿಗಣಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಭೂಮಿಾಲೀಕರ ಒತ್ತಡಕ್ಕೆ ಮಣಿದಿರುವರೆಂದು ಭಾಸವಾಗುತ್ತದೆ. ರಸ್ತೆ ನಿರ್ಮಾಣ ಕಾರ್ಯವೂ ಅಪೂರ್ಣವಾಗಿರುವುದರಿಂದ ಸ್ಥಳೀಯ ನಾಗರೀಕರಂ ತೊಂದರೆಗೀಡಾಗಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಎಲ್ಲಿಂದೆ ಡಿಮ್ಯಾಂಡ್ ಬರುತ್ತದೆ. ಡಿಮಾಂಡ್ ಬಂದಾಗ ಇದರ ಬಗ್ಗೆ ಹೇಳಿದರೆ ಸಂಬಂಧಪಟ್ಟಮಂತ್ರಿಗಳು ಉತ್ತರ ಕೊಡುತ್ತಾರೆ. ಇದನ್ನೆಲ್ಲಾ ನಿಯಮ ೫೩ಳಿರ ಪ್ರಕಾರ ಎತ್ತಿದರೆ ಇಲ್ಲಿ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದು ಸಬ್ಮಿಷನ್ ಮಾಡಲುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಪ್ರಶ್ನೆ ಕೇಳುವುದಕ್ಕೆ, ಕಾಲಿಂಗ್ ಅಟೆನ್ಷನ್ ನೋಟೀಸ್ ತರುವುದಕ್ಕೆ ಈ ತರಹ ಬೇರೆ ಮಾರ್ಗಗಳು ಇಲ್ಲ ಇಲ್ಲದಿದ್ದರೆ ನಿಯಮ ೫೩ಳಿರ ಪ್ರಕಾರ ತರಲಿ. ಈಗ್ಗೆಚನ್ನಪಟ್ಟಣದ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದರ ಬಗ್ಗೆ ಮಂತ್ರಿಗಳು ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ, ಅದು ಸರಿಯಾಗಿದೆ. ಪೋಲೀಸ್ ಕಾನ್ಸ್ಟೇಬಲ್‌ನ್ನು ಟ್ರಾನ್ಸ್‌ಫರ್ ಮಾಡಿದರು. ಸಬ್‌ಇನ್ಸ್‌ಪೆಕ್ಟರ್ ಠಾಣೆಯಲ್ಲಿರಲಿಲ್ಲ ಆಸ್ಪತ್ರೆಯಲ್ಲಿ ನಾನು ಹೋಗಿದ್ದಾಗ ಡಾಕ್ಟರು ಇರಲಿಲ್ಲ. ಇಂತಹ ಪ್ರಶ್ನೆಗಳನ್ನು ನಿಯಮ ೫೩ಳಿರ ಪ್ರಕಾರ ತಂದರೆ ನಾವು ಸಂಪರ್ಕವಾದ ಉತ್ತರ ಕೊಡಂವುದಕ್ಕೆ ಆಗುವುದಿಲ್ಲ.ಆಥವಾ ನಾವು ಉತ್ತರ ತರಿಸಿ ಕೊಡುವಾಗ ಪ್ರಶ್ನೆ ಮಾಡಿದಂತಹ ಸ್ನೇಹಿತರು ಇರುವುದಿಲ್ಲ.ಸರ್ಕಾರಉತ್ತರ ಹೇಳುವಾಗ ಯಾರ್ಯಾರು ಇರಲಿಲ್ಲ ಎನ್ನುವ ಬಗ್ಗೆ ನಾನು ಒಂದು ಪಟ್ಟಿಯನ್ನು ತಯಾರು ಮಾಡಿದ್ದೇನೆ.ಇಲ್ಲಿ ಕೆಲವು ವಿಷಯಗಳ ಬಗ್ಗೆ ನಾನು ಉತ್ತರ ಕೊಡಿಸುತ್ತೇನೆ. ನಾನು ಇಲ್ಲಿ ತಮಗೆ ಉತ್ತರ ತರಿಸಿ ಕೊಡಲಾಗುವುದೆಂದು ಏನಂ ಹೇಳುತ್ತೇನೆ, ಆ ಬಗ್ಗೆ ತಕ್ಷಣವೇ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರಗಳನ್ನು ಬರೆಯಿಸುತ್ತಿದ್ದೇನೆ. ಆದರೆ ಆ ಯಾವ ಕಾರಣಕ್ಕೋಸ್ಕರ ನಿಯಮ ೫೩ಳಿರ ಇದೆಯೋ ಅದಂ ಉಪಯೋಗವಾಗಂತ್ತಿಲ್ಲ, ಅದರ ಫಲ ಮಾನ್ಯ ಸದಸ್ಯರಿಗೆ ದೊರಕುತ್ತಿಲ್ಲ. ಮಾನ್ಯ ಚಿನ್ನಪ್ಪನವರು ತಾವೇನು ಈಗ ನಿಯಮ ೫೩ಳಿರ ಪ್ರಕಾರ ಪ್ರಶ್ನೆ ಮಾಡಿದ್ದಾರೆ, ಅದನ್ನು ಕಾಲಿಂಗ್ ಅಟೆನ್ಷನ್ ಮೂಲಕ ಅಥವಾ ಪ್ರಶ್ನೆ ಮೂಲಕ ಕೇಳಬಹುದಾಗಿತ್ತು. ಹತ್ತು ದಿವಸಗಳಲ್ಲಿ ಉತ್ತರ ಬರುತ್ತಿತ್ತು. ನಾವು ಉತ್ತರ ಕೊಡುವುದಿಲ್ಲ ಅಂದರೆ ತಾವು ಬಿಡುವುದಿಲ್ಲ ಈಗ ತಮಗೆ ಸಮರ್ಪಕವಾದ ಉತ್ತರ ಬರುವುದಿಲ್ಲ. ನಿಯಮ ೫೩ಳಿರ ಉದ್ದೇಶ ಸಫಲವಾಗುವುದಿಲ್ಲವೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ಕಚೇರಿಯಲ್ಲೂ ಇಂತಹದ್ದಕ್ಕೆಲ್ಲಾ ಯಾವುದು ಪ್ರಾಮುಖ್ಯ ಎಂಬುದನ್ನು ಪರಿಗಣಿಸಿ ತಾವು ಸಹ ಇಂತಹವುಗಳಿಗೆ ಕತ್ತರಿ ಪ್ರಯೋಗವನ್ನು ಬಲವಾಗಿ ಮಾಡಬೇಕೆಂದು ಹೇಳುತ್ತೇನೆ.

(೫) ನಿವೃತ್ತಿ ಶಿಕ್ಷಕರಿಗೆ ಕೊಡತಕ್ಕ ತಾತ್ಕಾಲಿಕ ಪರಿಹಾರ ಮತ್ತು ಭದ್ರಾವತಿ ಕಾರ್ಖಾನೆಯ ಕಾರ್ಮಿಕರ ಸಂಘದ ಬಗ್ಗೆ

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ನಿವೃತ್ತ ಶಿಕ್ಷಕರಿಗೆ ತಾತ್ಕಾಲಿಕ ಪರಿಹಾರ ಕೊಡುವಂತೆ ಬೇಡಿಕೆಯನ್ನಿಟ್ಟು ಅವರಿಗೆ ಸಿಗಬೇಕಾಗಿರುವ ಸಂಪೂರ್ಣ ಪರಿಹಾರ ತಾರೀಖು ೧-೮-೧೯೮೫ ರಿಂದ ಸಿಗಬೇಕೆಂಬ ಬೇಡಿಕೆಯನ್ನು ಇಟ್ಟಿರುತ್ತಾರೆ.